4. ಸಾರ್ವಜನಿಕ ಉದ್ದಿಮೆಗಳಲ್ಲಿ ಕಾರ್ಮಿಕರ ಹಿತಾಸಕ್ತಿಗಳಿಗೆ ಸಮರ್ಪಕ ರಕ್ಷಣೆ ನೀಡಲು ಅಗತ್ಯ ಉದ್ಯೋಗ ಸುಧಾರಣಾ ನೀತಿಗಳನ್ನು ರೂಪಿಸುವುದು. ಈ ನೀತಿಗಳಲ್ಲಿ ಸ್ವಯಂ ನಿವೃತ್ತಿ ಯೋಜನೆ ಅಳವಡಿಸಿಕೊಂಡು ಹಾಗೂ ಪುನಶ್ಚೇತನ ನಿಧಿಯನ್ನು ಸ್ಥಾಪಿಸುವುದು.

5. ಪುನಃಶ್ಚೇತನ ನಿಧಿಯ ನಿರ್ವಹಣೆಗೆ ಒಂದು ಉನ್ನತ ಮಟ್ಟದ ಸಮಿತಿ ರಚನೆ ಹಾಗೂ ಅದರ ಕಾರ್ಯವಿಧಾನಗಳನ್ನು ರೂಪಿಸುವುದು.

6. ಪ್ರತಿಯೊಂದು ಉದ್ಯಮದಲ್ಲಿನ ಷೇರುದಾರರು, ಕಾರ್ಮಿಕರು, ಗ್ರಾಹಕರು ಮತ್ತು ಇತರರ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಅಗತ್ಯ ಶಿಫಾರಸ್ಸುಗಳನ್ನು ಮಾಡುವುದು.

7. ಪ್ರತಿಯೊಂದು ಉದ್ದಿಮೆಗೆ ಸಂಬಂಧ ಪಟ್ಟಂತೆ ಸರ್ಕಾರದಿಂದ ಅನುಮೋದಿತವಾದ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಮತ್ತು ಈ ಬಗ್ಗೆ ಉಸ್ತುವಾರಿ ಜವಾಬ್ದಾರಿಯನ್ನು ಕರ್ನಾಟಕ ರಾಜ್ಯ ಸಾರ್ವಜನಿಕ ಉದ್ದಿಮೆಗಳ ಮಹೋದ್ಯಮಕ್ಕೆ ವಹಿಸಲಾಗಿದ್ದು ಇದು 'ನೋಡಲ್ ಎಜೆನ್ಸಿ' ಯಾಗಿ ಕಾರ್ಯ ನಿರ್ವಹಿಸುವುದು. ಮಹಾನಿರ್ದೇಶಕರು ಮತ್ತು ಅಪರ ಪ್ರಧಾನ ಕಾರ್ಯದರ್ಶಿಗಳು ಆಯೋಗಕ್ಕೆ ಅಗತ್ಯವಾದ ಎಲ್ಲಾ ಸಹಾಯವನ್ನು ನೀಡುವುದು.

ಕರ್ನಾಟಕ ರಾಜ್ಯ ಹಣಕಾಸು ನಿಗಮ ನಷ್ಟದಲ್ಲಿರುವುದು

3294 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಹಣಕಾಸು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯ ಹಣಕಾಸು ನಿಗಮ ಇಲ್ಲಿಯವರೆಗೆ ಎಷ್ಟು ನಷ್ಟವನ್ನು ಅನುಭವಿಸಿದೆ?*

ಆ) *ಇದಕ್ಕೆ ಕಾರಣಗಳೇನು?*

ಇ) *ಈ ಸಂಸ್ಥೆಯು ಲಾಭಾದಾಯಕವಾಗಿ ನಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಎಂ. ಶಿವಣ್ಣ (ಹಣಕಾಸು ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು 31.3.2000ರ ವರೆಗೆ 26.19 ಕೋಟಿ ರೂ.ಗಳ ನಷ್ಟವನ್ನು ಅನುಭವಿಸಿದೆ.

ಆ) ಯುಕ್ತ ನಿಯಮಗಳನ್ವಯ ನಿಷ್ಕ್ರಿಯ ಆಸ್ತಿಗಳ ನಿರ್ವಹಣೆಗಾಗಿ ತೆಗೆದಿಡಲಾದ ಮೊತ್ತ 212.10 ಕೋಟಿ ರೂ.ಗಳು ಸಣ್ಣ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು ಆರ್ಥಿಕ ಪ್ರಗತಿಯ ಹಿಂಜರಿತದಿಂದಾಗಿ ಸಾಲ ಮರುಪಾವತಿಸಲು ವಿಫಲವಾಗಿದೆ. ಆರ್ಥಿಕ ರಂಗದ ಹಿಂಜರಿತದಿಂದ ಹೊಸ ಘಟಕಗಳಿಗೆ ಸಾಲ ನೀಡುವಿಕೆಯಲ್ಲಿ ಗಣನೀಯವಾಗಿ ಇಳಿತ ಉಂಟಾಗಿದೆ. ಅಲ್ಲದೆ, ವಸೂಲಾತಿ

ಪ್ರಮಾಣದಲ್ಲಿ ಇಳಿಕೆ, ಅಧಿಕ ಬಡ್ಡಿದರ ಹೊಂದಿರುವ ಸಾಲಗಳ ಬಾಕಿ ಹಾಗೂ ಬಡ್ಡಿದರದಲ್ಲಿ ಉಂಟಾದ ಕಡಿತ ಇವು ಸಂಸ್ಥೆಯು ನಷ್ಟ ಅನುಭವಿಸಲು ಪ್ರಮುಖ ಕಾರಣಗಳಾಗಿವೆ.

ಇ) ಮೆ. ಕ್ರಿಸಿಲ್ ಲೆಡ್ಜ್‌ಸರಿ ಸರ್ವಿಸಸ್ ಇವರ ಶಿಫಾರಸ್ಸುಗಳನ್ನು ಜಾರಿಗೊಳಿಸಲಾಗಿದೆ. ಈ ನಿಟ್ಟಿನಲ್ಲಿ ಸಿಬ್ಬಂದಿ ಸಂಖ್ಯೆಯನ್ನು ಕಡಿತಗೊಳಿಸಿ ಆಡಳಿತ ನಿರ್ವಹಣಾ ವೆಚ್ಚವನ್ನು ಇಳಿಸಲು ಸ್ವಯಂ ನಿವೃತ್ತಿ ಯೋಜನೆಯನ್ನು ಜಾರಿ ಮಾಡಲಾಗಿದೆ. ನಷ್ಟದಲ್ಲಿ ನಡೆಯುತ್ತಿದ್ದ ಸಂಸ್ಥೆಯ ಹತ್ತು ಶಾಖಾ ಕಛೇರಿಗಳನ್ನು ಮುಚ್ಚಲಾಗಿದೆ. ಇತ್ತೀಚಿನ ರಾಜ್ಯ ಹಣಕಾಸು ಸಂಸ್ಥೆಗಳ ಕಾಯ್ದೆಗೆ ಭಾರತ ಸರ್ಕಾರವು ಮಾಡಿರುವ ತಿದ್ದುಪಡಿಯಿಂದಾಗಿ 5.00 ಕೋಟಿ ರೂ.ಗಳ ಸಾಲವನ್ನು ಹಾಗೂ ಎಸ್‌ಐಡಿಬಿಐ ಅನುಮತಿ ಪಡೆದು 20.00 ಕೋಟಿ ರೂ.ಗಳ ಸಾಲವನ್ನು ಮಂಜೂರು ಮಾಡಬಹುದಾಗಿದೆ. ಅಲ್ಲದೆ ಸಂಸ್ಥೆಯ ಶೇರು ಬಂಡವಾಳವನ್ನು 500.00 ಕೋಟಿ ರೂ.ಗಳಿಗೆ ಹೆಚ್ಚಿಸಲು ತಿದ್ದುಪಡಿಯಲ್ಲಿ ಅವಕಾಶ ಮಾಡಲಾಗಿದೆ. ಈ ಕ್ರಮಗಳಿಂದ ಸಂಸ್ಥೆಯನ್ನು ಲಾಭದಾಯಕವಾಗಿ ನಡೆಸಲು ಸಾಧ್ಯವಾಗಬಹುದು ಎಂದು ನಿರೀಕ್ಷಿಸಲಾಗಿದೆ.

N.G.E.F. ಕಾರ್ಖಾನೆಯ ಪುನಶ್ಚೇತನ ಕಾರ್ಯಕ್ರಮ

3295 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಎನ್.ಜಿ.ಇ.ಎಫ್ ಕಾರ್ಖಾನೆ ಎಂದು ಪ್ರಾರಂಭವಾಯಿತು?

ಆ) ಈ ಕಾರ್ಖಾನೆ ಯಾವ ವರ್ಷದಿಂದ ನಷ್ಟಕ್ಕೆ ಗುರಿಯಾಗಿದೆ?

ಇ) ಇಲ್ಲಿಯವರೆಗೆ ಆಗಿರುವ ನಷ್ಟವೆಷ್ಟು?

ಈ) ಈ ಕಾರ್ಖಾನೆಯನ್ನು ಪುನಶ್ಚೇತನ ಗೊಳಿಸಲು ಸರ್ಕಾರ ಕಾರ್ಯಕ್ರಮ ಹಮ್ಮಿಕೊಂಡಿದೆಯೇ?

ಉ) ಹಾಗಿದ್ದಲ್ಲಿ ಅದರ ಪೂರ್ಣ ವಿವರ ನೀಡುವುದು?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು) :

ಅ) ಎನ್.ಜಿ.ಇ.ಎಫ್. ಸಂಸ್ಥೆಯನ್ನು ಈ ಮೊದಲಿದ್ದ ಜಿ.ಇ.ಎಫ್.ನ (ಈಗಿನ ಕವಿಕಾ) ವಿಸ್ತರಣೆಯಾಗಿ 1961 ರಲ್ಲಿ ಆರಂಭಿಸಲಾಯಿತು. 19-4-1965 ರಲ್ಲಿ ಎನ್‌ಜಿಇಎಫ್‌ನ್ನು ಒಂದು ಕಾರ್ಪೊರೇಟ್ ಸಂಸ್ಥೆಯಾಗಿ ಪರಿವರ್ತಿಸಿ ಎನ್.ಜಿ.ಇ.ಎಫ್. ಲಿಮಿಟೆಡ್ ಎಂದು ನೋಂದಣಿ ಮಾಡಲಾಯಿತು.

ಆ) ಸಂಸ್ಥೆಯು 1988 ರಿಂದ ನಷ್ಟ ಅನುಭವಿಸುತ್ತಿದ್ದು, 1991-92ರಿಂದ ಸತತವಾಗಿ ನಷ್ಟ ಅನುಭವಿಸುತ್ತಿದೆ.

ಇ) ದಿನಾಂಕ 31-3-2000 ವರೆಗೆ ಸಂಸ್ಥೆಯ ಕ್ರೋಡೀಕೃತ ನಷ್ಟಗಳ ಮೊತ್ತ 222.90 ಕೋಟಿ ರೂಪಾಯಿಗಳಷ್ಟಾಗಿರುತ್ತದೆ.